# ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು –560001

ಸಂಖ್ಯೆ:ಸಶಿಅ/ಸ.ಶಿ/ಸು/01/2009–10 ದಿನಾಂಕ: 16.05.2009

## ಸುತ್ತೋಲೆ

**ವಿಷಯ: ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಸಮನ್ವಯ ಶಿಕ್ಷಣ ಕಾರ್ಯಚಟುವಟಿಕೆಗಳ ಅನುಷ್ಠಾನಕ್ಕಾಗಿ ಮಾರ್ಗಸೂಚಿ.**

2009–10 ನೇ ಸಾಲಿಗೆ ಜಿಲ್ಲೆಗಳಿಂದ ಸಿದ್ಧಪಡಿಸಿ ಸಲ್ಲಿಸಿದ್ದ ಕಾರ್ಯಯೋಜನೆ ಆಯವ್ಯಯದ ಆಧಾರದ ಮೇಲೆ PAB (Project Approval Board) ಯಿಂದ ಅನುಮೋದನೆಯಾಗಿರುತ್ತದೆ. ಇದರ ಪ್ರತಿಯನ್ನು ಇದರೊಂದಿಗೆ ಅನುಬಂಧಿಸಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಪಾಲಿನ ಅನುದಾನ ಬಿಡುಗಡೆಗನುಗುಣವಾಗಿ ಸಮನ್ವಯ ಶಿಕ್ಷಣದ ಅನುಮೋದಿತ ಕಾರ್ಯಚಟುವಟಿಕೆಗಳನ್ನು ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

**ಜಿಲ್ಲೆಯಿಂದ ಬ್ಲಾಕ್‌ಗಳಿಗೆ ಚಟುವಟಿಕೆವಾರು ಹಣ ಬಿಡುಗಡೆ ಮಾಡಿದ ಮತ್ತು ಅದಕ್ಕನುಗುಣವಾಗಿ ಬ್ಲಾಕ್‌ಗಳಲ್ಲಿ ನಿಗದಿತ ಕಾರ್ಯಚಟುವಟಿಕೆಗಳಿಗೆ ವೆಚ್ಚ ಮಾಡಿದ ವಿವರಗಳನ್ನು ನಿಗದಿತ ನಮೂನೆಯಲ್ಲಿ ತಪ್ಪದೇ ರಾಜ್ಯ ಯೋಜನಾ ಕಚೇರಿಯ ಸಮನ್ವಯ ಶಿಕ್ಷಣ ಶಾಖೆಗೆ ಪ್ರತಿ ತಿಂಗಳು ನೀಡುವುದು.**

ವಿಶೇಷ ಅಗತ್ಯತೆಯುಳ್ಳ ಮಕ್ಕಳ ಮಧ್ಯವರ್ತನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಚಟುವಟಿಕೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸುವುದು.

### ವಿಶೇಷ ಅಗತ್ಯವುಳ್ಳ ಮಕ್ಕಳ ವೈದ್ಯಕೀಯ ತಪಾಸಣೆ: (Formal & Functional Assessment)

ವಿಶೇಷ ಸಮೀಕ್ಷೆಯಲ್ಲಿ ಗುರ್ತಿಸಿರುವ **CWSN** ಮಕ್ಕಳ ವೈದ್ಯಕೀಯ ತಪಾಸಣೆಯನ್ನು ಕಡ್ಡಾಯವಾಗಿ ಮಾಡಬೇಕು. ತಪಾಸಣೆಯು ಕೇವಲ ಸಾಧನ ಸಾಮಗ್ರಿಗಳನ್ನು ನೀಡುವ ಸಲುವಾಗಿ ಅಲ್ಲ ಸಾಮಾನ್ಯ ಆರೋಗ್ಯ ತಪಾಸಣೆಯನ್ನು ಮಾಡಿಸಬೇಕು ಎಂಬುದನ್ನು ಎಲ್ಲಾ ಶಿಕ್ಷಕರಿಗೆ ಮನವರಿಕೆ ಮಾಡಿಕೊಡುವುದು ತುಂಬ ಮುಖ್ಯವಾಗಿರುತ್ತದೆ.

ಆರೋಗ್ಯ ಚೈತನ್ಯ ಕಾರ್ಯಕ್ರಮದಲ್ಲಿ ನಡೆಸಲಾಗುವ ವೈದ್ಯಕೀಯ ತಪಾಸಣೆಯಲ್ಲಿ ತೀವ್ರತರದ ಸಮಸ್ಯೆಗಳಿಲ್ಲದ, ಕಳೆದ ಸಾಲಿನಲ್ಲಿ ಸಾಧನ ಸಾಮಗ್ರಿ ಪಡೆದಿರುವ, ಅಲ್ಪ ಮಟ್ಟದ ನ್ಯೂನತೆಯುಳ್ಳ ಹಾಗೂ ತಜ್ಞರ ಸಲಹೆ ಅವಶ್ಯವಿಲ್ಲದ ಮಕ್ಕಳಿಗೆ ಸಾಮಾನ್ಯ ಆರೋಗ್ಯ ತಪಾಸಣೆ (ಕಣ್ಣು, ಕಿವಿ, ಹಲ್ಲು, ಚರ್ಮ ಹಾಗೂ ಇತರೆ ಕಾಯಿಲೆಗಳಿರುವ ಬಗ್ಗೆ) ಹಾಗೂ ಈ ಕಾಯಿಲೆಗಳಿಂದ ಮುಂದೆ ಆಗಬಹುದಾದ ಹಾನಿ ಹಾಗೂ ಅದರ ತೀವ್ರತೆಯ ಬಗ್ಗೆ ತಪಾಸಣೆ ಮಾಡಿ, ಹೆಲ್ತ್ ಕಾರ್ಡ್‌ನಲ್ಲಿ ದಾಖಲಿಸಲಾಗುವುದು. ಈ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಆರೋಗ್ಯ ಸಮಸ್ಯೆಗಳಿದ್ದರೆ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ ಲಭ್ಯವಿರುವ ಚಿಕಿತ್ಸೆಯನ್ನು ಒದಗಿಸಲಾಗುವುದು. ಒಂದು ವೇಳೆ ಮಕ್ಕಳಿಗೆ ಶಸ್ತ್ರಚಿಕಿತ್ಸೆ ಅವಶ್ಯವಿದ್ದಲ್ಲಿ ಪ್ರಾಥಮಿಕ ಆರೋಗ್ಯಕೇಂದ್ರ ಮತ್ತು ತಾಲೂಕ್ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಯ ಸೌಲಭ್ಯಗಳನ್ನು ಉಚಿತವಾಗಿ ದೊರಕಿಸಲಾಗುವುದು. ಸದರಿ ಆಸ್ಪತ್ರೆಯಲ್ಲಿ ಲಭ್ಯವಿಲ್ಲದ ಶಸ್ತ್ರಚಿಕಿತ್ಸೆಗಳನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ಮಾಡಲಾಗುವುದು. ಒಂದು ವೇಳೆ ಸದರಿ ಜಿಲ್ಲಾ ಆಸ್ಪತ್ರೆಯಲ್ಲಿಯೂ ಶಸ್ತ್ರಚಿಕಿತ್ಸೆ ಸೌಲಭ್ಯ ಲಭ್ಯವಿಲ್ಲದಿದ್ದಲ್ಲಿ ಸಹಕಾರ ಇಲಾಖೆಯಿಂದ ಗುರುತಿಸಲ್ಪಟ್ಟ **ಯಶಸ್ವಿನಿ ನೆಟ್‌ವರ್ಕ್** ಆಸ್ಪತ್ರೆಗಳಲ್ಲಿ ಯಶಸ್ವಿನಿ ಟ್ರಸ್ಟ್ ಗುರ್ತಿಸಿದ ಶಸ್ತ್ರಚಿಕಿತ್ಸೆಗಳನ್ನು ಮತ್ತು ಇತರೆ ಚಿಕಿತ್ಸೆಗಳನ್ನು ಕೆಲವೊಂದು ಷರತ್ತಿಗೆ ಒಳಪಟ್ಟು ಉಚಿತವಾಗಿ ಮಾಡಲು ಏರ್ಪಾಡು ಮಾಡಲಾಗಿದೆ. ಈ ಚಿಕಿತ್ಸೆಗಳು ವಿದ್ಯಾರ್ಥಿಗಳಿಗೆ ಸಂಪೂರ್ಣವಾಗಿ ಉಚಿತವಾಗಿರುತ್ತವೆ.

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವೈದ್ಯಕೀಯ ತಪಾಸಣೆಯನ್ನು ಬ್ಲಾಕ್ ಹಂತದಲ್ಲಿ ನಿರ್ವಹಿಸಬೇಕಾಗಿದೆ. ಮೆಡಿಕಲ್ ಕ್ಯಾಂಪ್ ಮತ್ತು ಸಾಧನ–ಸಲಕರಣೆಗಳ ವಿತರಣೆಗಾಗಿ ಕೈಗೊಳ್ಳುವ ಶಿಬಿರಗಳಿಗೆ ಪ್ರತಿ ಬ್ಲಾಕ್‌ಗೆ ವರ್ಷಕ್ಕೆ ಒಟ್ಟಾರೆ ರೂ.15,000.00 ಮಿತಿಯಲ್ಲಿ ಹಣ ಬಳಸಬೇಕು. ತಪಾಸಣಾವಧಿಯಲ್ಲಿ ಮಕ್ಕಳಿಗೆ ಹಾಗೂ ಪೋಷಕರಿಗೆ

ಲಘು ಉಪಹಾರ, ಮಕ್ಕಳು/ಪೋಷಕರಿಗೆ ನಿಖರವಾದ ಬಸ್ ದರ, ವೈದ್ಯರ ಓಡಾಟ, ಸಾಗಾಣಿಕೆ, ವೈದ್ಯಕೀಯ ಸಲಕರಣೆಗಳು ಹಾಗೂ ಗೌರವಧನ ನೀಡಲು ಹಣ ವೆಚ್ಚ ಮಾಡಬಹುದಾಗಿದೆ.

**ಬ್ಲಾಕ್ ಹಂತದಲ್ಲಿ** ನಡೆಯುವ ವಿಶೇಷ ವೈದ್ಯಕೀಯ ತಪಾಸಣೆಯಲ್ಲಿ ತೀವ್ರ ತರದ ನ್ಯೂನತೆಯುಳ್ಳ ಹಾಗೂ ಅಲ್ಪಪ್ರಮಾಣದ ನ್ಯೂನ್ಯತೆ ಹೊಂದಿದ್ದು, ಸಾಧನ ಸಲಕರಣೆಗಳ ಅವಶ್ಯಕತೆಯಿರುವ ಮಕ್ಕಳು, ಕಳೆದ ಸಾಲಿನಲ್ಲಿ ಸಾಧನ ಸಾಮಗ್ರಿ ಪಡೆಯದ ಮಕ್ಕಳು (2 ವರ್ಷಗಳಿಗೊಮ್ಮೆ ಸಾಧನ ಸಲಕರಣೆಗಳನ್ನು ಅವಶ್ಯಕತೆಯಿರುವ ಮಗುವಿಗೆ ಪುನಃ ನೀಡಲು ಅವಕಾಶ ಕಲ್ಪಿಸಲಾಗಿದೆ.) ಸಾಧನ ಸಾಮಗ್ರಿಗಳ ಅವಶ್ಯಕತೆಯುಳ್ಳ ಹೊಸದಾಗಿ ದಾಖಲಾಗಿರುವ ಮಕ್ಕಳು, ಶಾಲಾ ಹಂತದಿಂದ ಸೂಚಿಸಿರುವ ಮಕ್ಕಳಿಗೆ ವಿಶೇಷ ತಜ್ಞರಿಂದ ತಪಾಸಣೆ ಮಾಡಿಸಬೇಕಾಗುತ್ತದೆ. ಇದನ್ನು ಜಿಲ್ಲಾ ಕಚೇರಿ ಹಾಗೂ ಸಾಧನ ಸಾಮಗ್ರಿಗಳನ್ನು ಒದಗಿಸುವ ಸಂಸ್ಥೆ ಮತ್ತು ಆರೋಗ್ಯ ಇಲಾಖೆಯ ಸಹಕಾರದೊಡನೆ ನಡೆಸುವುದು. ಬ್ಲಾಕ್ ಹಂತದ ಕೋಆರ್ಡಿನೇಷನ್ ಸಮಿತಿ ವೈದ್ಯಕೀಯ ತಪಾಸಣಾ ಶಿಬಿರಗಳ ವ್ಯವಸ್ಥೆ ಮಾಡಬೇಕು. ಹಾಗೂ ಈ ವೈದ್ಯಕೀಯ ಶಿಬಿರಗಳ ವ್ಯವಸ್ಥೆಯ ಮೇಲುಸ್ತುವಾರಿಯನ್ನು ಜಿಲ್ಲಾ ಯೋಜನಾ ಕಚೇರಿ ವಹಿಸಬೇಕು.

ವಿಶೇಷ ಹಾಗೂ ಅನಿವಾರ್ಯ ಸಂಧರ್ಭಗಳಲ್ಲಿ ಜಿಲ್ಲಾ ಹಂತದಲ್ಲಿ ವೈದ್ಯರ ನೆರವಿನೊಡನೆ ತಪಾಸಣೆ ಮಾಡಿಸಬೇಕಾದಲ್ಲಿ ಜಿಲ್ಲಾ ಕಛೇರಿಯವರು ವ್ಯವಸ್ಥೆ ಮಾಡಿಕೊಡುವುದು. ವೈದ್ಯಕೀಯ ತಪಾಸಣಾ ಶಿಬಿರಗಳು 2009ರ ಜುಲೈ ತಿಂಗಳ ಮಧ್ಯದಲ್ಲಿ ಪೂರ್ಣಗೊಳಿಸಬೇಕು ಹಾಗೂ ಸರಬರಾಜು ಸಂಸ್ಥೆಗೆ ಜುಲೈ 20ರೊಳಗೆ ಕಾರ್ಯಾದೇಶವನ್ನು ನೀಡತಕ್ಕದ್ದು.

### ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳಿಗೆ ಸಾಧನ ಸಾಮಗ್ರಿಗಳ ಪೂರೈಕೆ.

ತಪಾಸಣಾ ಸಮಯದಲ್ಲಿ ವೈದ್ಯರು ಮಕ್ಕಳಿಗೆ ಶಿಫಾರಸ್ಸು ಮಾಡುವ ಸಾಧನ ಸಾಮಗ್ರಿಗಳಾದ ವೀಲ್ ಚೇರ್, ಟ್ರೈಸಿಕಲ್, ಕ್ರೆಚರ್ಸ್, ಕ್ಯಾಲಿಪರ್ಸ್, ಶ್ರವಣ ಸಾಧನ, ಕನ್ನಡಕ ಮುಂತಾದವುಗಳನ್ನು ವಿವಿಧ ಸಂಘ-ಸಂಸ್ಥೆಗಳು ಮತ್ತು ದಾನಿಗಳ ಮೂಲಕ ಉಚಿತವಾಗಿ ಪೂರೈಸಲು ಪ್ರಯತ್ನಿಸಬೇಕು. DDRC, ALIMCO ಸಂಸ್ಥೆಗಳಿಂದ 40:60ರ (ಎಸ್.ಎಸ್.ಎ-40: ಅಲಿಂಕೋ-60) ಅನುಪಾತದಲ್ಲಿ ಈ ಸೌಲಭ್ಯ ಕಲ್ಪಿಸಬಹುದು. [ಪಿ.ಎ.ಬಿ &ಬಿ 09-10 ರಲ್ಲಿನ 10.(ii)] ಉತ್ತಮ ಗುಣಮಟ್ಟದ (**ISI**) ಸಾಮಗ್ರಿ ದೊರಕುವಂತೆ ಕ್ರಮ ಕೈಗೊಳ್ಳಬಹುದು. ವಿವಿಧ ಸಾಧನ-ಸಾಮಗ್ರಿವಾರು ಬೇಡಿಕೆ ಪಟ್ಟಿಯನ್ನು ಜಿಲ್ಲಾ ಮಟ್ಟದಲ್ಲಿ ಸಿದ್ಧಪಡಿಸಿ ಅರ್ಹ ಸರಬರಾಜು ಸಂಸ್ಥೆಗಳಿಗೆ ಸರಬರಾಜು ಆದೇಶವನ್ನು ಜಿಲ್ಲಾ ಯೋಜನಾಧಿಕಾರಿಗಳು ನೀಡಬೇಕು. ಈ ಸಾಮಗ್ರಿಗಳನ್ನು ಅಕ್ಟೋಬರ್ 2009ರೊಳಗೆ ಎಲ್ಲಾ ಮಕ್ಕಳಿಗೆ ಪೂರೈಸುವಂತೆ ಸ್ವತಃ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. **ವಿವಿಧ ಯೋಜನೆಗಳ ಮೂಲಕ ವಿಕಲ ಚೇತನರಿಗೆ ಸಾಧನ ಸಲಕರಣೆ ನೀಡುತ್ತಿದ್ದು-ಅವು ಪೂನರಾವರ್ತನೆಯಾಗದಂತೆ (Duplicate) ಗಮನಹರಿಸಿ-ವಿತರಣೆ ಮಾಡಲು ತಿಳಿಸಿದೆ.**

- ✓ ಸಾಧನ ಸಾಮಗ್ರಿ ಒದಗಿಸುವಾಗ ಮಗುವಿನ ಅವಶ್ಯಕತೆಯನ್ನು ಆಧರಿಸಿ ನೀಡಬೇಕು.
- ✓ ಎರಡು ವರ್ಷಕ್ಕೆ ಒಂದು ಬಾರಿ ಸಾಧನ-ಸಲಕರಣೆಯನ್ನು ನೀಡಬೇಕು. ಕಳೆದ ಸಾಲಿನಲ್ಲಿ ನೀಡಿಲ್ಲದ ಬಗ್ಗೆ ದೃಢೀಕರಣ ಪಡೆಯಬೇಕು.
- ✓ ಸಾಧನ-ಸಲಕರಣೆಯನ್ನು ವಿತರಣೆ ಮಾಡುವಾಗ ಅದರ ನಿರ್ವಹಣೆ ಬಗ್ಗೆ ತರಬೇತಿ ನೀಡಬೇಕು.
- ✓ ಸಾಧನ ಸಲಕರಣೆಗಳನ್ನು ಪ್ರಸಕ್ತ ಸಾಲಿನ ಆಗಸ್ಟ್‌ನಿಂದ ಅಕ್ಟೋಬರ್ ಮಾಹೆಯೊಳಗೆ ವಿತರಿಸಲು ಕ್ರಮ ಕೈಗೊಳ್ಳಬೇಕು.
- ✓ ಕಳೆದ ಸಾಲುಗಳಲ್ಲಿ ಒದಗಿಸಿದ ಸಾಧನ-ಸಾಮಗ್ರಿಗಳನ್ನು ದುರಸ್ಥಿ ಮಾಡಿಸುವ ವ್ಯವಸ್ಥೆಯನ್ನು ಮೆಡಿಕಲ್ ಕ್ಯಾಂಪ್‌ಗಳಲ್ಲಿ ಒದಗಿಸಬೇಕು ಮತ್ತು ಬ್ಲಾಕ್‌ನಲ್ಲಿರುವ ಸಮನ್ವಯ ಶಿಕ್ಷಣ ಸಂಪನ್ಮೂಲ ಕೊಠಡಿಗಳಲ್ಲಿಯೂ ಸಹ ದುರಸ್ಥಿಗೊಳಿಸುವ ವ್ಯವಸ್ಥೆ ಇರಬೇಕು.

### ಶಿಕ್ಷಕರಿಗೆ ತರಬೇತಿ

ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಹೊಂದಿರುವ ಸರ್ಕಾರಿ ಶಾಲೆಯ ಶಿಕ್ಷಕರಿಗೆ 3-5 ದಿನಗಳ ಸಮನ್ವಯ ಶಿಕ್ಷಣ ತರಬೇತಿಯನ್ನು ಸಮನ್ವಯ ಶಿಕ್ಷಣ ಕಾರ್ಯಕ್ರಮದಡಿ ನೀಡುತ್ತಿದ್ದು, 2009-10ರಲ್ಲಿ (ಈ ಶೈಕ್ಷಣಿಕ ವರ್ಷ) ಇದನ್ನು ತರಬೇತಿ ಶೀರ್ಷಿಕೆಯಡಿ ನೀಡಲಾಗುತ್ತಿದೆ. ಇದಕ್ಕಾಗಿ ಎಸ್.ಎಸ್.ಎ ಕೇಂದ್ರ ಕಛೇರಿಯಲ್ಲಿ ಸಾಹಿತ್ಯ

ಸಿದ್ಧಪಡಿಸಿ ಜಿಲ್ಲೆಗಳಿಗೆ ಹಂಚಲಾಗುತ್ತಿದೆ. ತರಬೇತಿಯಲ್ಲಿ ಇವುಗಳನ್ನು ಅಧ್ಯಾಪಕರಿಗೆ ನೀಡುವುದು/ಬಳಕೆ ಮಾಡುವುದು.

ಈ ತರಬೇತಿಯ ಸಂಘಟನೆ ಮತ್ತು ಅನುಷ್ಠಾನವನ್ನು ಡಯಟ್ ಸಂಸ್ಥೆಗಳಿಗೆ ವಹಿಸಲಾಗಿದೆ. ಇದಕ್ಕೆ ಪೂರಕವಾಗಿ ಡಿ.ಡಿ.ಪಿ.ಐ. (ಆ) ಕಾರ್ಯನಿರ್ವಹಿಸುವುದು. ದೀರ್ಘಾವಧಿ ತರಬೇತಿಯನ್ನು ಭೋಜ್ ಮುಕ್ತ ವಿಶ್ವವಿದ್ಯಾಲಯದ ಮೂಲಕ ಅಥವಾ ಆರ್.ಸಿ.ಐ ಅನುಮೋದಿತ ಸಂಸ್ಥೆಯ ಮೂಲಕ ಪಡೆಯಲು ಶಿಕ್ಷಕರನ್ನು ನಿಯೋಜಿಸುವುದು. ವಿಶೇಷ ಶಿಕ್ಷಣದಲ್ಲಿ ಬಿಎಡ್. ತರಬೇತಿಯನ್ನು ಪಡೆಯಲು ನಿಮ್ಮ ಜಿಲ್ಲೆಯ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಪದವೀಧರ ಐ.ಇ.ಆರ್.ಟಿಗಳಿಗೆ (ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಉನ್ನತ ವ್ಯಾಸಂಗಕ್ಕೆ ನೇಮಕಾತಿ ಪ್ರಾಧಿಕಾರವೇ ಅನುಮತಿ ನೀಡಬೇಕಿರುವುದರಿಂದ) ತಮ್ಮ ಹಂತದಲ್ಲಿಯೇ ಪರಿಶೀಲಿಸಿ ವಿಶೇಷ ಶಿಕ್ಷಣದಲ್ಲಿ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡುವ ಕುರಿತು ಸೂಕ್ತ ಕ್ರಮ ಜರುಗಿಸುವುದು. (ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ 31.01.2008ನ್ನು ಗಮನಿಸಿ)

**ಜಾಗೃತಿ ಕಾರ್ಯಕ್ರಮ**

ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಯೋಜಿಸಿಕೊಂಡಿರುವಂತೆ ಪ್ರತಿ ಸಿ.ಆರ್.ಸಿಯಲ್ಲಿ ಕಲಾ ಮೇಳಗಳ ಮೂಲಕ ಸಮನ್ವಯ ಶಿಕ್ಷಣ ಜಾಗೃತಿಯನ್ನು ಉಂಟುಮಾಡಲು ಪ್ರತಿ ಕ್ಲಸ್ಟರ್‌ಗೆ ರೂ.2000/- ಅನುದಾನವನ್ನು ಒದಗಿಸಿದೆ. ಇದನ್ನು ಕಲಾ ಮೇಳದ ಪೂರಕ ಸಾಮಗ್ರಿ ಹಾಗೂ ಕಲಾ ತಂಡದ ನಿರ್ವಹಣಾ ವೆಚ್ಚವಾಗಿ ಭರಿಸಬಹುದು. ಜಾಗೃತಿ ಕಾರ್ಯಕ್ರಮಗಳನ್ನು ಜುಲೈ 09ರೊಳಗೆ ಮುಗಿಸತಕ್ಕದ್ದು. **ಜಾಗೃತಿ ಶಿಬಿರಗಳನ್ನು ಆಯೋಜಿಸುವಾಗ ಆಯಾ ಕ್ಲಸ್ಟರಿನಲ್ಲಿ ಕಂಡುಬರುವ ಅಂಗವಿಕಲತೆಗೆ ಕಾರಣವಾಗುವ ಅಂಶಗಳನ್ನು ತಜ್ಞ ವೈದ್ಯರನ್ನು ಸಂಪರ್ಕಿಸಿ ತಿಳಿಯಬಹುದು. ಹಾಗೂ ಜಾಗೃತಿ ಶಿಬಿರದ ಕಾರ್ಯಕ್ರಮದಲ್ಲಿ ಈ ಅಂಶಗಳನ್ನು ಸಾಂದರ್ಭಿಕವಾಗಿ ಅಳವಡಿಸಿ – ಸಂದೇಶವನ್ನು ನವಿರಾಗಿ ಸಮುದಾಯಕ್ಕೆ ತಲುಪಿಸಬೇಕು.**

ಜೊತೆಗೆ ಈ ಜಾಗೃತಿ ಕಾರ್ಯಕ್ರಮಗಳು ಮಕ್ಕಳ ದಾಖಲಾತಿ, ಹಾಜರಾತಿ, ನಿರ್ವಹಣೆ, ಸರ್ಕಾರದಿಂದ ದೊರೆಯುವ ಸೌಲಭ್ಯಗಳು, ಮಕ್ಕಳ ಹಕ್ಕುಗಳು, ಪೋಷಕರ/ಸಮುದಾಯದ/ ಚುನಾಯಿತ ಪ್ರತಿನಿಧಿಗಳ ಹಾಗೂ ಶಿಕ್ಷಣ ಇಲಾಖೆಯ ಜವಾಬ್ದಾರಿಗಳ ಬಗ್ಗೆ ಬೆಳಕು ಮೂಡಿಸುವುದಾಗಿರಬೇಕು. ತರಬೇತಿ ಸಾಹಿತ್ಯವನ್ನು ಜಿಲ್ಲಾ ಡಯಟ್‌ನ ಜಿಲ್ಲಾ ಮಟ್ಟದ ತರಬೇತಿ ಸಂಪನ್ಮೂಲ ತಂಡಗಳ ಮೂಲಕ ಸಿದ್ಧಪಡಿಸಿಕೊಳ್ಳಬೇಕು. ಸಾಹಿತ್ಯದ ಒಂದು ಪ್ರತಿಯನ್ನು ರಾಜ್ಯ ಕಛೇರಿಗೆ ಕಳುಹಿಸಬೇಕು. ಈ ಸಂಬಂಧ ಪ್ರತಿ ಕ್ಲಸ್ಟರ್ ಮತ್ತು ಬ್ಲಾಕ್ ಹಂತದಲ್ಲಿ ಯುಕ್ತ ದಾಖಲೀಕರಣ ಮಾಡುವುದು.

**ರ್ಯಾಂಪ್ಸ್‌ಗಳ ನಿರ್ಮಾಣ ಮತ್ತು ಸಿ.ಡಬ್ಲ್ಯೂ.ಎಸ್.ಎನ್ ಸ್ನೇಹಿ ಶೌಚಾಲಯಗಳ ಸೌಲಭ್ಯ**

ಹೊಸದಾಗಿ ಶಾಲಾ ಕಟ್ಟಡಗಳನ್ನು ಮತ್ತು ಹೊಸ ಶೌಚಾಲಯಗಳನ್ನು ಕಟ್ಟಿಸುವಾಗ ಕಡ್ಡಾಯವಾಗಿ ರ್ಯಾಂಪ್ (ಸಿ.ಪಿ.ಡಬ್ಲ್ಯುಡಿ. ಸ್ಪೆಸಿಫಿಕೇಶನ್‌ನಂತೆ) ಮತ್ತು ಕೈಹಿಡಿಗಳಂತಹ ಅನುಕೂಲತೆಗಳನ್ನು ಒದಗಿಸಬೇಕು. ಸದರಿ ಸಾಲಿನಲ್ಲಿ ಸಮನ್ವಯ ಶಿಕ್ಷಣದಡಿಯಲ್ಲಿ ರ್ಯಾಂಪ್ಸ್‌ಗಳ ನಿರ್ಮಾಣಕ್ಕೆ ಅನುದಾನ ಅನುಮೋದನೆಯಾಗಿರುವುದಿಲ್ಲ. ಸಿವಿಲ್ ಕಾಂಪೋನೆಂಟ್ ಅಡಿಯಲ್ಲಿ CWSN ಗಾಗಿ ವಿಶೇಷ ಶೌಚಾಲಯಗಳು ಅನುಮೋದನೆಯಾಗಿರುವ ಜಿಲ್ಲೆಗಳು, ಈ ಶೌಚಾಲಯಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡುವುದು.

**ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳ (ಐ.ಇ.ಆರ್.ಟಿ) ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ**

ಪ್ರತಿ ಬ್ಲಾಕ್‌ಗೆ ಮಂಜೂರಾಗಿರುವ 3 ಐ.ಇ.ಆರ್.ಟಿಗಳ ಹುದ್ದೆಗಳು ಖಾಲಿ ಇದ್ದಲ್ಲಿ, ಅದನ್ನು ಅರ್ಹತೆ ಹೊಂದಿರುವ ಶಿಕ್ಷಕರನ್ನು ಆ ಹುದ್ದೆಗೆ ಪೂರ್ಣಕಾಲಿಕವಾಗಿ ನಿಯೋಜಿಸುವುದು.

2005-06ರಲ್ಲಿ ಬಿ.ಆರ್.ಸಿಗಳಲ್ಲಿ ಮಂಜೂರಾಗಿರುವ 3 ಐ.ಇ.ಆರ್.ಟಿ ಹುದ್ದೆಗಳನ್ನು 90ದಿನಗಳ ಸಮನ್ವಯ ಶಿಕ್ಷಣ ತರಬೇತಿ ಪಡೆದ ಶಿಕ್ಷಕರನ್ನು (ಭೋಜ್ ಯೂನಿವರ್ಸಿಟಿ) ಪೂರ್ಣಕಾಲಿಕವಾಗಿ ನಿಯೋಜಿಸುವುದು. ಐ.ಇ.ಆರ್.ಟಿಗಳ ವೇತನ, ಟಿ.ಎ ಮತ್ತು ಸಾದಿಲ್ವಾರನ್ನು ಕಾಲ ಕಾಲಕ್ಕೆ ತಪ್ಪದೆ ನೀಡಲು ಕ್ರಮ ಕೈಗೊಳ್ಳಬೇಕು. ಐ.ಇ.ಆರ್.ಟಿಗಳಿಗೆ ವೇತನವನ್ನು ಸಮನ್ವಯ ಶಿಕ್ಷಣ ಚಟುವಟಿಕೆಯಡಿಯಲ್ಲಿ ನೀಡಬೇಕು. ಒಂದು ಪಕ್ಷ ಸಮನ್ವಯ ಶಿಕ್ಷಣದಡಿ ಸಾಕಷ್ಟು ಹಣ ಇಲ್ಲದಿದ್ದಲ್ಲಿ ಆಡಳಿತ ವೆಚ್ಚದಲ್ಲಿ ಭರಿಸಲು ಸೂಕ್ತ ಅನುಮೋದನೆ ಪಡೆದು ಭರಿಸುವುದು. ಐ.ಇ.ಆರ್.ಟಿಗಳ ಕಾರ್ಯಪರಿಶೀಲನಾ ವರದಿಯನ್ನು ಈ ಕಛೇರಿ ಸುತ್ತೋಲೆಸಮಸಂಖ್ಯೆ ದಿನಾಂಕ 16.01.2008ರಲ್ಲಿ ನೀಡಿರುವಂತೆ ನಿಗದಿತ ನಮೂನೆಯಲ್ಲಿ ಜಿಲ್ಲಾ ಐ.ಇ. ಸಮನ್ವಯಾಧಿಕಾರಿಗಳು ಪಡೆದು ವರದಿ ಪರಿಶೀಲಿಸಿ ಈ

ಕಛೇರಿಗೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ವರದಿ ಕಳುಹಿಸಲು ತಿಳಿಸಿದೆ. ಈ ಸಂಬಂಧ ಈ ಕಛೇರಿ ನೀಡುವ ಹಿಮ್ಮಾಹಿತಿ ಆಧರಿಸಿ ಕ್ರಮ ಮಾಡುವುದು. ಈ ಕಛೇರಿಯ ಸುತ್ತೋಲೆ 16.01.2008 ರಂತೆ ಎಫ್.ಟಿ.ಎ. ನೀಡುವುದು.

**ಜಿಲ್ಲಾ ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳ ಸೇವೆ**

2007-08ನೇ ಸಾಲಿನ ವಾರ್ಷಿಕ ಕಾರ್ಯ ಯೋಜನೆಯಲ್ಲಿ ಅನುಮೋದನೆಯಾಗಿರುವಂತೆ ಪ್ರತಿ ಜಿಲ್ಲೆಗೆ ಒಬ್ಬ ಜಿಲ್ಲಾ ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಯ (**VI / HI / MR** ಇವುಗಳಲ್ಲಿ ಯಾವುದಾದರು ಒಂದರಲ್ಲಿ ಬಿ.ಇಡ್ ಪದವಿಯನ್ನು ಪಡೆದಿರಬೇಕು) ಸೇವೆಯನ್ನು ಪಡೆಯಲು ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಏಜೆನ್ಸಿಗಳ ಮೂಲಕ ನಿಯಮಾನುಸಾರ (ಗರಿಷ್ಠ ರೂ. 8000/- ರೂಗಳ ಮಿತಿಯೊಳಗೆ) ಕ್ರಮ ಕೈಗೊಳ್ಳಬೇಕು. ಮಾಸಿಕ ರೂ 250 ಮೀರದಂತೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಯನ್ನು ಆಡಳಿತಾತ್ಮಕ ನಿರ್ವಹಣಾ ವೆಚ್ಚದಿಂದ ಭರಿಸಬಹುದು. ಇದಕ್ಕಾಗಿ ಜಿಲ್ಲಾ AWP&B ಯಲ್ಲಿ ಅನುದಾನ ನಿಗದಿಯಾಗಿದ್ದು, ಈ ಶೀರ್ಷಿಕೆಯಲ್ಲಿ ಭರಿಸಬೇಕು. ಜೂನ್ 2009 ರಿಂದಲೇ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಪಡೆಯುವುದು ಜಿಲ್ಲಾ ಸಮನ್ವಯಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಯಾವುದೇ ಕಾರಣಕ್ಕೂ ವಿಳಂಬ ಕೂಡದು.

**ಸಮನ್ವಯ ಶಿಕ್ಷಣ ರಿಸೋರ್ಸ್ ಸೆಂಟರ್‌ಗಳ ಸ್ಥಾಪನೆ**

ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಕೆಲವು ಚಟುವಟಿಕೆಗಳಿಗೆ ಸಂಬಂಧಿಸಿದ ಸಾಮಗ್ರಿಗಳು ಮತ್ತು ಅಗತ್ಯ ಸೇವೆಗಳನ್ನು ಒದಗಿಸುವ ಅವಶ್ಯಕತೆ ಇರುತ್ತದೆ. ಇದಕ್ಕಾಗಿ ಪ್ರತಿ ಬ್ಲಾಕಿನಲ್ಲಿ ಒಂದು ರಿಸೋರ್ಸ್ ಸೆಂಟರ್‌ನ್ನು ಸ್ಥಾಪಿಸಲಾಗಿದೆ. 2009-10ನೇ ಸಾಲಿನಲ್ಲಿ ಈ ಕೇಂದ್ರಗಳಲ್ಲಿ ಹೆಚ್ಚಿನ ಸಾಮಗ್ರಿಗಳನ್ನು ಹೊಂದಿಸುವುದರ ಮೂಲಕ ಕೇಂದ್ರವನ್ನು ಸಬಲಗೊಳಿಸಲು ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ರೂ.20,000/-ಗಳು 2009-10ನೇ ಸಾಲಿನ ಆಯವ್ಯಯದಲ್ಲಿ ಅನುಮೋದನೆಯಾಗಿರುತ್ತದೆ. (ಕಟ್ಟಡ, ಪೀಠೋಪಕರಣ ಇತ್ಯಾದಿ ಸಾಮಗ್ರಿಗಳಿಗೆ ಅವಕಾಶವಿರುವುದಿಲ್ಲ) ನಿಗದಿಪಡಿಸಿದ ಮೊತ್ತದ ಮಿತಿಯಲ್ಲಿ ಈ ಕಾರ್ಯ ಕೈಗೊಳ್ಳಬೇಕು. ಈ ಕೇಂದ್ರವು ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳ ಶೈಕ್ಷಣಿಕ ಕಲಿಕಾ ಸಾಧನೆಗೆ ಹಾಗೂ ಮಾನಸಿಕ ಮತ್ತು ದೈಹಿಕ ವಿಕಾಸಕ್ಕೆ ಅನುಕೂಲವಾಗುವಂತಹ ಸಾಮಗ್ರಿಗಳನ್ನು ಹೊಂದಿದ್ದು, ಅವುಗಳನ್ನು ಬಿ.ಆರ್.ಸಿ ಕೇಂದ್ರಗಳಿಗೆ ಬರುವ ಯಾವುದೇ ತರಬೇತಿಯ ಶಿಕ್ಷಕರು ಕಡ್ಡಾಯವಾಗಿ ಈ ಸಾಮಗ್ರಿಗಳನ್ನು ವೀಕ್ಷಿಸಿ, ತಮ್ಮ ತರಗತಿಗಳಲ್ಲಿ ಇರಬಹುದಾದ ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳಿಗೆ ಸಹಾಯಕವಾಗುವ ವಾತಾವರಣವನ್ನು ಉಂಟುಮಾಡಿಕೊಳ್ಳುವಂತಿರಬೇಕು.

ಈ ಕೇಂದ್ರಗಳಲ್ಲಿ ತೀವ್ರತರದ/ ಬಹುವಿಕಲತೆ ಹೊಂದಿರುವ ಮಕ್ಕಳಿಗೆ ಸ್ಪೀಚ್ ಥೆರಪಿ/ ಫಿಜಿಯೋ ಥೆರಪಿ ಮುಂತಾದ ಅಗತ್ಯವಿರುವ ಸೇವೆಯನ್ನು ಒದಗಿಸಲು ಪ್ರತಿ ತಿಂಗಳಿನಲ್ಲಿ ಒಂದು ನಿರ್ದಿಷ್ಟ ದಿನಾಂಕವನ್ನು ಗೊತ್ತುಪಡಿಸಿ, ಆ ದಿನಗಳಲ್ಲಿ ಮಕ್ಕಳು ಮತ್ತು ಪೋಷಕರಿಗೆ ಈ ಸೇವೆ ನೀಡುವ ತಜ್ಞರನ್ನು (ಪಿಜಿಯೋ ಮತ್ತು ಸ್ಪೀಚ್ ಥೆರೆಪಿಸ್ಟ್ ಮುಂತಾದ) ಗೊತ್ತುಪಡಿಸಿಕೊಳ್ಳುವುದು. ಆ ದಿನಕ್ಕಾಗಿ ಸೂಕ್ತ ಸೇವಾ ಸಂಭಾವನೆಯನ್ನು ತಜ್ಞರಿಗೆ ನೀಡುವುದು. ತಜ್ಞರ ಸಂಭಾವನೆಯನ್ನು ವಿವಿಧ ಸಂಘಸಂಸ್ಥೆಗಳು ಹಾಗೂ ದಾನಿಗಳ ಮೂಲಕ ಪೂರೈಸಿಕೊಳ್ಳುವುದು.

ಸಂಪನ್ಮೂಲ ಕೊಠಡಿಗಳನ್ನು ತೀವ್ರ ಅಂಗವಿಕಲತೆ ಹೊಂದಿರುವ ಮಕ್ಕಳು ಸದುಪಯೋಗಪಡಿಸಿಕೊಳ್ಳುವಂತೆ ಅವಕಾಶ ಕಲ್ಪಿಸುವುದು. ಇದಕ್ಕಾಗಿ ವರ್ಷದ ಪ್ರಾರಂಭದಲ್ಲಿ ಸ್ಥಳೀಯವಾಗಿ ಮತ್ತು ಸುತ್ತಮುತ್ತಲಿನ ಹೆಚ್.ಬಿ.ಇ. ಸ್ವಯಂ ಸೇವಕರ ಸಹಾಯದಿಂದ ಸಂಪನ್ಮೂಲ ವ್ಯಕ್ತಿಗಳ ಸಹಾಯ ಪಡೆದು ಗೃಹಾಧಾರಿತ ಮಕ್ಕಳಿಗೆ ನಿಶ್ಚಿತ ದಿನಗಳಲ್ಲಿ ಚಟುವಟಿಕೆ ಮಾಡಿಸಲು ಕಾರ್ಯಯೋಜನೆ ಸಿದ್ಧಮಾಡಿ ಅದನ್ನು ಅನುಸರಿಸುವುದು. ಸುಮಾರು ಒಂದು ತಿಂಗಳವರೆಗೆ ಐ.ಇ.ಆರ್.ಟಿ.ಗಳು ಸ್ವಯಂ ಸೇವಕರಿಗೆ ಮಾರ್ಗದರ್ಶನ ಮಾಡಿದರೆ, ಅವರು ತಮ್ಮ ಮಕ್ಕಳಿಗೆ ಸೂಕ್ತ ಚಟುವಟಿಕೆ ಮಾಡಿಸಲು ಸಮರ್ಥರಾಗುವರು. ತರುವಾಯ ಸ್ವಯಂ ಸೇವಕರು (ಬಿ.ಆರ್.ಸಿ. ಕೇಂದ್ರದ ಆಸುಪಾಸಿನ) ಸಂಪನ್ಮೂಲ ಕೇಂದ್ರದಲ್ಲಿ ತಮ್ಮ ವಿದಾರ್ಥಿಗಳಿಗೆ ಚಟುವಟಿಕೆ ಮಾಡಿಸಲು ಸೂಕ್ತ ಏರ್ಪಾಟು ಮಾಡುವುದು. ಇದರಲ್ಲಿ ಪೋಷಕರು ಕೂಡಾ ಭಾಗವಹಿಸಬಹುದು.

ಇದಕ್ಕಾಗಿ ಬಿ.ಆರ್.ಸಿಯವರು ಒಂದು ಕಾರ್ಯಯೋಜನೆ ರೂಪಿಸಿ ಅನುಷ್ಠಾನಗೊಳ್ಳುವುದನ್ನು ಖಾತ್ರಿಪಡಿಸಬೇಕು.

**ಕರೆಕ್ಟೀವ್ ಸರ್ಜರಿ :** 2009-10ನೇ ಸಾಲಿನಲ್ಲಿ **ಪಿ.ಎ.ಬಿಯಿಂದ** ಅಗತ್ಯತೆಯಿರುವ ಮಕ್ಕಳಿಗೆ ಕರೆಕ್ಟೀವ್ ಸರ್ಜರಿ ಮಾಡಲು ತೀರ್ಮಾನಿಸಲಾಗಿದೆ. ಪ್ರತಿ ಮಗುವಿನ ಘಟಕವೆಚ್ಚ ರೂ. 5000/- ಮಂಜೂರಾಗಿದ್ದು, ಈ ಕೆಳಗಿನ ಚಟುವಟಿಕೆಗಳನ್ನು ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ನಡೆಸುವುದು.

- ✓ ಗುರ್ತಿಸಲ್ಪಟ್ಟ ಮಕ್ಕಳ ಪಟ್ಟಿಯನ್ನು ಸಿದ್ದಪಡಿಸುವುದು.
- ✓ ವೈದರ ಸಲಹೆಯಂತೆ ಸರ್ಜರಿಗೆ ತಗಲುವ ನಿಖರವಾದ ವೆಚ್ಚವನ್ನು ನಿಗಧಿಪಡಿಸುವುದು.
- ✓ ಸರ್ಕಾರೇತರ ಸಂಘಸಂಸ್ಥೆಗಳ ಸಹಕಾರದೊಂದಿಗೆ ಹೆಚ್ಚಿನ ಅನುದಾನವನ್ನು ಪಡೆಯುವುದು.
- ✓ ಅರ್ಹ ಮಕ್ಕಳಿಗೆ ಕರೆಕ್ಟೀವ್ ಸರ್ಜರಿಗಳನ್ನು ಮಾಡಿಸಲು ಕ್ರಮಕೈಗೊಳ್ಳುವುದು.
- ✓ ಕರೆಕ್ಟೀವ್ ಸರ್ಜರಿಗೆ ಒಳಪಡುವ ಪ್ರಕರಣಗಳನ್ನು ಜಿಲ್ಲಾ ಕಛೇರಿಗೆ ಕಳುಹಿಸುವುದು. ಡಿ.ಡಿ.ಪಿ.ಐರವರ ಹಂತದಲ್ಲಿ ರೂ. 25,000/-ವರೆಗೆ ಮತ್ತು ZP & CEO ಹಂತದಲ್ಲಿ ಗರಿಷ್ಠ ರೂ. 50,000/- ಮಂಜೂರಾತಿ ನೀಡಬಹುದು. ಈ ಹಣವನ್ನು ಬೇರೆ ಯಾವ ಅನುದಾನ ದೊರೆಯದಿದ್ದಾಗ ಅಥವಾ ಬೇರೆ ಮೂಲದಿಂದ ದೊರೆತ ಅನುದಾನ ಕಡಿಮೆ ಬಿದ್ದಾಗ ಮಾತ್ರ ಅನುಮತಿಸತಕ್ಕದ್ದು. ಮಂಜೂರಾತಿ ಸಂಬಂಧ ಪ್ರತ್ಯೇಕವಹಿ ನಿರ್ವಹಿಸುವುದು ಮತ್ತು ರಶೀತಿಗಳನ್ನು ಕಾಯ್ದಿರಿಸಿಕೊಳ್ಳುವುದು.

**ಗೃಹಾಧಾರಿತ ಶಿಕ್ಷಣದ ಸ್ವಯಂ ಸೇವಕರಿಗೆ ತರಬೇತಿ.**

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪ್ರಾಥಮಿಕ ಶಿಕ್ಷಣದ ಮುಖ್ಯವಾಹಿನಿಗೆ ತರುವ ತಂತ್ರಗಳ ಕಾರ್ಯಕ್ರಮದಲ್ಲಿ ತೀವ್ರ ನ್ಯೂನ್ಯತೆ ಕಾರಣದಿಂದಾಗಿ ಶಾಲೆಗೆ ಬರಲು ಸಾಧ್ಯವಾಗದ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣ ನೀಡುವುದು ಒಂದು ಪ್ರಮುಖ ಚಟುವಟಿಕೆಯಾಗಿದೆ. ಈಗಾಗಲೇ ಡಯಟ್ ಧಾರವಾಡದ ಮೂಲಕ ಸ್ಪರ್ಶ ಎಂಬ ತರಬೇತಿ ಸಾಹಿತ್ಯ ಕೈಪಿಡಿಯನ್ನು ಎಲ್ಲಾ ಐ.ಇ.ಆರ್.ಟಿಗಳಿಗೆ ನೀಡಲಾಗಿದ್ದು, ಅದರಂತೆ 04 ದಿನಗಳ ಸನಿವಾಸ ತರಬೇತಿಯನ್ನು ಡಯೆಟ್‌ನ ಸಹಯೋಗದೊಂದಿಗೆ ಸ್ವಯಂ ಸೇವಕರಿಗೆ ನೀಡುವುದು. ಇದಕ್ಕಾಗಿ ಒಬ್ಬರಿಗೆ ದಿವೊಂದಕ್ಕೆ ರೂ. 100ರ ಘಟಕ ವೆಚ್ಚದಲ್ಲಿ 4 ದಿನಗಳ ತರಬೇತಿಯನ್ನು ನೀಡಬಹುದಾಗಿದೆ.

**ಗೃಹಾಧಾರಿತ ಶಿಕ್ಷಣಕ್ಕೊಳಪಡುವ ಮಕ್ಕಳ ಪಾಲಕರಿಗೆ ತರಬೇತಿ.**

ತೀವ್ರತರದ ನ್ಯೂನ್ಯತೆಯುಳ್ಳ ಮಕ್ಕಳ ಪೋಷಕರಿಗೆ 2 ದಿನಗಳ ತರಬೇತಿಯನ್ನು ಸಂಘಟಿಸುವುದು. ತರಬೇತಿ ವೆಚ್ಚ ಒಂದು ದಿನಕ್ಕೆ ತಲಾ ರೂ 50 ಮೀರದಂತೆ ಭರಿಸುವುದು. ತರಬೇತಿ ಸಾಹಿತ್ಯವನ್ನು ಡಯೆಟ್‌ನ ತರಬೇತಿ ಸಂಪನ್ಮೂಲ ತಂಡಗಳು ಒದಗಿಸುವುದು. ತರಬೇತಿ ಮತ್ತು ತರಬೇತಿ ಸಾಹಿತ್ಯ ಪೋಷಕರಲ್ಲಿ ಭರವಸೆ ಮತ್ತು ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳುವ ಮನೋಭಾವನೆಯನ್ನು ರೂಪಿಸಲು ಕೇಂದ್ರೀಕರಿಸಲ್ಪಡಬೇಕು. ಜೊತೆಗೆ ಮಗುವನ್ನು ನಿಭಾಯಿಸಲು, ಆರೈಕೆ ಮಾಡಲು ಬೇಕಾದ ಕೆಲವು ಪ್ರಾಥಮಿಕ ಕೌಶಲ ಮತ್ತು ಜ್ಞಾನ ಕುರಿತಂತೆ ವಿವರ ನೀಡಬೇಕು. ಈ ತರಬೇತಿಯನ್ನು ಆಗಸ್ಟ್ 2009ರೊಳಗೆ ಪೂರೈಸತಕ್ಕದ್ದು.

**ಗೃಹಾಧಾರಿತ ಶಿಕ್ಷಣಕ್ಕೊಳಪಡುವ ಮಕ್ಕಳು ಮತ್ತು ಪೋಷಕರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುವುದು.**

ಗೃಹಾಧಾರಿತ ಶಿಕ್ಷಣಕ್ಕೊಳಪಡುವ ಮಕ್ಕಳಿಗೆ ಫಿಸಿಯೋತೆರಪಿಯ ಅವಶ್ಯಕತೆಯಿದ್ದು, ಇದನ್ನು ಬ್ಲಾಕ್‌ಗಳಲ್ಲಿನ ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳಲ್ಲಿ ಕೊಡಲಾಗುತ್ತಿದೆ. ಫಿಸಿಯೋತೆರಪಿಯನ್ನು ಹೇಗೆ ಮಾಡಬೇಕು ಎಂಬುದರ ಬಗ್ಗೆ ಆ ಮಕ್ಕಳ ಪಾಲಕರಿಗೆ/ಸಹಾಯಕರಿಗೆ ಅಗತ್ಯವಾಗಿ ತಿಳಿದಿರಬೇಕು. ಏಕೆಂದರೆ ಇದನ್ನು ಅವರು ತಮ್ಮ ಮಕ್ಕಳಿಗೆ ಮನೆಯಲ್ಲಿಯೇ ಮಾಡಲು ಸಹಾಯವಾಗುತ್ತದೆ. ಪೋಷಕರು/ಸಹಾಯಕರು ಈ ಮಕ್ಕಳನ್ನು ಸಂಪನ್ಮೂಲ ಕೇಂದ್ರಗಳಿಗೆ ವಾರದಲ್ಲಿ 2 ದಿನಗಳು ಕರೆದುಕೊಂಡು ಹೋಗಬೇಕಾಗಿರುವುದರಿಂದ ಇವರಿಗೆ ಒಂದು ತಿಂಗಳಿಗೆ ಪ್ರತಿ ಮಗುವಿಗೆ ರೂ. 150/-ರಂತೆ ಸಾರಿಗೆ ಸೌಲಭ್ಯಕ್ಕಾಗಿ ಅನುದಾನ ನೀಡಬೇಕು. ಈ ಹಣವನ್ನು ಪೋಷಕರಿಗೆ ಚೆಕ್ ಮೂಲಕ ಪ್ರತಿ ತಿಂಗಳು 05ನೇ ತಾರೀಖಿನೊಳಗೆ ನೀಡತಕ್ಕದ್ದು. ವ್ಯತ್ಯಯಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ.

**ಕೇಂದ್ರ ಕಛೇರಿ ನಿರ್ವಹಿಸುವ ಚಟುವಟಿಕೆಗಳು:**

ಬ್ರೈಲ್ ಪುಸ್ತಕ ಮುದ್ರಣಕ್ಕೆ ಹಣ ಮಂಜೂರಾತಿ (ರೂ. 6.00ಲಕ್ಷ), ಬ್ರೈಲ್ ತರಬೇತಿ (ರೂ. 2.00ಲಕ್ಷ), ಐ.ಇ.ಆರ್.ಟಿ ತರಬೇತಿ (9.00 ಲಕ್ಷ) ಯನ್ನು ಕೈಗೆತ್ತಿಕೊಳ್ಳಲಾಗುತ್ತದೆ.

**ಕಾರ್ಯಾಗಾರ/ಸಭೆಗಳು**

ಐ.ಇ.ಆರ್.ಟಿ ಮತ್ತು ಜಿಲ್ಲಾ ಸಿ.ಡಬ್ಲ್ಯು.ಎಸ್.ಎನ್ ಸಮನ್ವಯಾಧಿಕಾರಿಯವರ ಸಭೆಯನ್ನು ಪ್ರತಿ ತಿಂಗಳುಡಿ.ವೈ.ಪಿ.ಸಿಯವರು ನಡೆಸುವುದು. ಇದಕ್ಕೆ ಆಗುವ ಖರ್ಚುವೆಚ್ಚಗಳನ್ನು ಪ್ರತಿ ರೆವಿನ್ಯೂ ಜಿಲ್ಲೆಗೆ ಗರಿಷ್ಠ ರೂ.

30,000/– ಮಿತಿಯಲ್ಲಿ ಖರ್ಚು ಮಾಡತಕ್ಕದ್ದು. ಈ ಹಣದಿಂದ ಟಿ.ಎ/ಡಿ.ಎ ಮತ್ತು ಪ್ರಾಸಂಗಿಕ ವೆಚ್ಚ ಭರಿಸಬಹುದು. ಪ್ರತಿ 2ತಿಂಗಳಿಗೊಮ್ಮೆ ಜಿಲ್ಲಾ ಸಿ.ಡಬ್ಲ್ಯು.ಎಸ್.ಎನ್ ಸಮನ್ವಯ ಅಧಿಕಾರಿಗಳ ಸಭೆಯನ್ನು ಎಸ್.ಎಸ್.ಎ ಕೇಂದ್ರ ಕಛೇರಿಯಲ್ಲಿ ನಡೆಸಲಾಗುವುದು. ಇದಕ್ಕಾಗಿ ರೂ. 1.066 ಲಕ್ಷಗಳನ್ನು ಇಟ್ಟಿದೆ. ಟಿ.ಎ/ಡಿ.ಎಗೆ ಹಣವನ್ನು ಬಳಸಿಕೊಳ್ಳುವುದು.

**ಪ್ರಕಟಣೆ,** ಭಿತ್ತಿಪತ್ರಗಳು, ಕರಪತ್ರಗಳು ಮತ್ತು ಇತರ ಪ್ರಚಾರ ಸಾಮಗ್ರಿಮುದ್ರಣ ಮತ್ತು ಹಂಚಿಕೆಗಾಗಿ ರೂ. 20,000/– ಗಳನ್ನು ಪ್ರತಿ ರೆವಿನ್ಯೂ ಜಿಲ್ಲೆಗೆ ಮೀಸಲಿಟ್ಟಿದೆ. ಇದನ್ನು ಬಳಸಿ ಪ್ರಚಾರ ಕೈಗೊಳ್ಳುವುದು. ಕೇಂದ್ರ ಕಛೇರಿಯು ಈ ಕಾರ್ಯಕ್ಕಾಗಿ ರೂ. 1.00ಲಕ್ಷ ಬಳಸಲು ಉದ್ದೇಶಿಸಿದೆ.

**ಮಾಸಿಕ ಪ್ರಗತಿ ವಿವರ ಸಲ್ಲಿಸುವುದು ಹಾಗೂ ಉಸ್ತುವಾರಿ**

ಪ್ರತಿ ತಿಂಗಳು ಮುಖ್ಯ ಲೆಕ್ಕಾಧಿಕಾರಿಯವರಿಗೆ ಮಾಸಿಕ ಆರ್ಥಿಕ ಪ್ರಗತಿ ವಿವರಗಳನ್ನು ಸಲ್ಲಿಸುವಾಗ ವಿಶೇಷ ಅಗತ್ಯವುಳ್ಳ ಮಕ್ಕಳ ಚಟುವಟಿಕೆಗಳ ಶೀರ್ಷಿಕೆಯಲ್ಲಿ ಜಿಲ್ಲಾ ವೆಚ್ಚವನ್ನು ನಮೂದಿಸುತ್ತಿದ್ದು, ಈ ಒಟ್ಟಾರೆ ಮೊತ್ತಕ್ಕೆ ಚಟುವಟಿಕೆವಾರು ವೆಚ್ಚವನ್ನು ವಿಂಗಡಿಸಿ ನೀಡಬೇಕು. ಉದಾಹರಣೆಗೆ ಜೂನ್ ತಿಂಗಳಲ್ಲಿ ಜಿಲ್ಲಾ ಸಮನ್ವಯ ಶಿಕ್ಷಣದ ಒಟ್ಟು ವೆಚ್ಚ ರೂ.3.50 ಲಕ್ಷ ಎಂದಾದರೆ ಅದರಲ್ಲಿ ಸಮನ್ವಯ ಶಿಕ್ಷಣ ಚಟುವಟಿಕೆಗಳಾದ ವೈದ್ಯಕೀಯ ತಪಾಸಣೆ/ ಸಾಧನ–ಸಲಕರಣೆ/ ತರಬೇತಿ/ ಐ.ಇ.ಆರ್.ಟಿಗಳ ವೇತನ/ ಇತ್ಯಾದಿಗಳಿಗೆ ಆದ ವೆಚ್ಚವನ್ನು ಪ್ರತ್ಯೇಕವಾಗಿ ಲಗತ್ತಿಕೆಯಲ್ಲಿ ಒದಗಿಸಿರುವ ನಿಗದಿತ ನಮೂನೆಯಲ್ಲಿ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ನೀಡಬೇಕು. (ಭೌತಿಕ ಮತ್ತು ಆರ್ಥಿಕ ಪ್ರಗತಿ ವಿವರ). ಚಟುವಟಿಕೆಯ ಭೌತಿಕ ಪ್ರಗತಿಯು ಆರ್ಥಿಕ ಪ್ರಗತಿಗೆ ಹೊಂದಿಕೆಯಾಗಿರಬೇಕು. (ಘಟಕ ವೆಚ್ಚ ಮತ್ತು ಭೌತಿಕ ಪ್ರಗತಿ).

ಸಮನ್ವಯ ಶಿಕ್ಷಣ ಚಟುವಟಿಕೆಗಳ ಮಾಸಿಕ ಪ್ರಗತಿಯ ವಿವರಗಳನ್ನು ಬ್ಲಾಕ್ ಮಟ್ಟದಲ್ಲಿ ಚಟುವಟಿಕೆವಾರು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಸಮನ್ವಯ ಚಟುವಟಿಕೆಗಳ ಪ್ರಗತಿಯನ್ನು (ಆರ್ಥಿಕ ಮತ್ತು ಭೌತಿಕ) Central Audit, State Audit AG, SSA External & Internal Audit ಗೆ ಒಳಪಡಿಸುವುದರಿಂದ ಈ ಎಲ್ಲಾ ಅಗತ್ಯ ವಿವರಗಳನ್ನು ಕಡ್ಡಾಯವಾಗಿ ಕ್ರಮಬದ್ಧವಾಗಿ ನಿರ್ವಹಿಸಬೇಕು. ಕಾರ್ಯಕ್ರಮದ ಪೂರ್ಣ ನಿರ್ವಹಣೆ ಆಯಾ ಡಿ.ಡಿ.ಪಿ.ಐ/ಡಿ.ವೈ.ಪಿ.ಸಿ/ಬಿ.ಇ.ಓ/ಬಿ.ಆರ್.ಸಿಯವರದಾಗಿದೆ. **ಜಿಲ್ಲಾ ಮಟ್ಟದಲ್ಲಿಯೂ ಬ್ಲಾಕ್‌ವಾರು ಮತ್ತು ಚಟುವಟಿಕೆವಾರು ಮಾಸಿಕ ವೆಚ್ಚವಹಿಯನ್ನು ಕಡ್ಡಾಯವಾಗಿ ದಾಖಲಿಸಬೇಕು.** ರಾಜ್ಯ ಕಚೇರಿಗೆ ಸರಿಯಾದ ಸಮಯಕ್ಕೆ ನಿಗದಿತ ವರದಿಗಳನ್ನು ನೀಡದಿದ್ದಲ್ಲಿ ಹಾಗೂ ನಿಖರ ಅಂಕಿ ಅಂಶಗಳನ್ನು ಒದಗಿಸಲು ವಿಫಲವಾದಲ್ಲಿ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಯವರನ್ನು ಹೊಣೆಗಾರರನ್ನಾಗಿ ಪರಿಗಣಿಸಲಾಗುವುದು.

ಸಮನ್ವಯ ಶಿಕ್ಷಣದ ಚಟುವಟಿಕೆಗಳ ಅನುಷ್ಠಾನದಲ್ಲಿ ಬಿ.ಆರ್.ಪಿ/ ಸಿ.ಆರ್.ಪಿ/ ಇ.ಸಿ/ ಐ.ಇ.ಆರ್.ಟಿ ಇವರುಗಳ ಕರ್ತವ್ಯ ಮತ್ತು ಜವಾಬ್ದಾರಿಗಳೇನೆಂಬುದನ್ನು ಸ್ವತಃ ಡಿ.ಡಿ.ಪಿ.ಐ, ಬಿ.ಇ.ಓ, ಬಿ.ಆರ್.ಸಿ ಇವರುಗಳು ಸ್ಪಷ್ಟವಾಗಿ ತಿಳಿದುಕೊಂಡು ಅದರಂತೆ ಕಾರ್ಯ ನಡೆಯುತ್ತಿರುವುದನ್ನು ಖಾತ್ರಿಪಡಿಸಿಕೊಂಡು ಸೂಕ್ತ ಮೇಲ್ವಿಚಾರಣೆಯನ್ನು ಆಯಾ ಹಂತದಲ್ಲಿ ಕೈಗೊಳ್ಳಬೇಕು.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಗಮನದಲ್ಲಿರಿಸಿಕೊಂಡು ಸಮನ್ವಯ ಶಿಕ್ಷಣದ ಚಟುವಟಿಕೆಗಳ ಅನುಷ್ಠಾನದಲ್ಲಿ ಸ್ಥಳೀಯ ಅಗತ್ಯತೆಗೆ ತಕ್ಕಂತೆ, ಸ್ವಂತ ಆಸಕ್ತಿ ಮತ್ತು ಇತರರ ಸಲಹೆ, ಮಾರ್ಗದರ್ಶನದೊಡನೆ ಕಾರ್ಯ ಚಟುವಟಿಕೆಗಳನ್ನು ಅರ್ಥಪೂರ್ಣವಾಗಿ ಜಾರಿಗೊಳಿಸಲು ಎಲ್ಲಾ ಹಂತದ ಅಧಿಕಾರಿ ಮತ್ತು ಸಿಬ್ಬಂದಿಗಳು ಬದ್ಧರಾಗಿರಲು ತಿಳಿಸಿದೆ. ಸಮನ್ವಯ ಶಿಕ್ಷಣದ ಈ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದಲ್ಲಿ ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಹಿರಿಯ ಕಾರ್ಯಕ್ರಮಾಧಿಕಾರಿ(ಸಮನ್ವಯ ಶಿಕ್ಷಣ) ಮತ್ತು ಕಾರ್ಯಕ್ರಮಾಧಿಕಾರಿಗಳಿಂದ ಪಡೆಯಬಹುದು. ಮೊಬೈಲ್ ದೂರವಾಣಿ ಸಂಪರ್ಕ: ಶ್ರೀ. ಹುಚ್ಚಯ್ಯ, ಹಿರಿಯ ಕಾರ್ಯಕ್ರಮಾಧಿಕಾರಿ, 9448999312/ ಶ್ರೀಮತಿ. ಹಸೀನಾ ಬೇಗಂ, ಕಾರ್ಯಕ್ರಮಾಧಿಕಾರಿ, 9448999316

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ,

ಪ್ರತಿಯನ್ನು ಸೂಕ್ತ ಕ್ರಮಕ್ಕೆ,.

1. ರಾಜ್ಯದ ಎಲ್ಲಾ ಡಿ.ಡಿ.ಪಿ.ಐ. ಗಳಿಗೆ ಮುಂದಿನ ಕ್ರಮಕ್ಕೆ.



H:\2009-10 ie suttole.doc

2. ರಾಜ್ಯದ ಎಲ್ಲಾ ಡಯಟ್ ಪ್ರಿನ್ಸಿಪಾಲರಿಗೆ ಮುಂದಿನ ಕ್ರಮಕ್ಕೆ.

3. ರಾಜ್ಯದ ಎಲ್ಲಾ ಡಿವೈಪಿಸಿಯವರಿಗೆ ಮುಂದಿನ ಕ್ರಮಕ್ಕೆ.

4. ರಾಜ್ಯದ ಎಲ್ಲಾ ಬಿ.ಇ.ಒ.ರವರಿಗೆ ಮುಂದಿನ ಸೂಕ್ತ ಕ್ರಮಕ್ಕೆ. ನಿಮ್ಮ ವ್ಯಾಪ್ತಿಯ ಎಲ್ಲಾ ಬಿ.ಆರ್.ಸಿ, ಕ್ಲಸ್ಟರ್ ಪ್ರೌಢಶಾಲೆ ಮುಖ್ಯಸ್ಥರಿಗೆ, ಸಿ.ಆರ್.ಪಿ.ಗಳಿಗೆ, ಐ.ಇ.ಆರ್.ಟಿ.ಗಳಿಗೆ, ಬ್ಲಾಕಿನ ಎಲ್ಲಾ ಮಾರ್ಗದರ್ಶಕರಿಗೆ, ಶಾಲೆಗಳಿಗೆ ಜೆರಾಕ್ಸ್ ಅಥವಾ ಸೈಕ್ಲೋಸ್ಟೈಲ್ ಮಾಡಿ ವಿತರಿಸಲು ತಿಳಿಸಿದೆ.

5. ಈ ಕಛೇರಿಯ ಎಲ್ಲಾ ಜಿಲ್ಲಾ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ.

**ಮಾಹಿತಿಗೆ ಕಳುಹಿಸಿದೆ :**

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ
2. ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ; ಪ್ರೌಢಶಿಕ್ಷಣ; ಡಿಎಸ್‌ಇಆರ್ ಟಿ ಅಲ್ಪ ಸಂಖ್ಯಾತ ಭಾಷೆಗಳು; ಧಾರಾವಾಡ; ಗುಲ್ಬರ್ಗಾ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಯ ಕಾರ್ಯ ನಿರ್ವಹಣಾಧಿಕಾರಿಯವರಿಗೆ
4. ಸಹನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, [ ಬೆಂಗಳೂರು; ಬೆಳಗಾವಿ; ಗುಲ್ಬರ್ಗಾ; ಮೈಸೂರು; (ವಿಭಾಗೀಯ ಕಛೇರಿಗಳು ) ಚಿತ್ರದುರ್ಗ; ಮೈಸೂರು; ಮಂಗಳೂರು; ಬೆಳಗಾವಿ; ಜಮಖಂಡಿ; ಗುಲ್ಬರ್ಗಾ; (ಶಿಕ್ಷಕರ ಸರ್ಕಾರಿ ಶಿಕ್ಷಣ ಕಾಲೇಜುಗಳ ಪ್ರಿನ್ಸಿಪಾಲರು) ಶಾಲಾ ಶಿಕ್ಷಣ ಸಿಪಿಐ ಕಛೇರಿ ಬೆಂಗಳೂರು; ಎಸಿಪಿಐ ಕಛೇರಿ ಗುಲ್ಬರ್ಗಾ; ಎಸಿಪಿಐ ಕಛೇರಿ, ಧಾರಾವಾಡ; ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.].
5. ರಾಜ್ಯದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಿಗೆ
6. ಸಂಪಾದಕರು, ಶಿಕ್ಷಣ ವಾರ್ತೆ.

**ಇವರಿಗೆ ಮಾಹಿತಿಗೆ ಸಲ್ಲಿಸಿದೆ:**

1. ಕಾರ್ಯದರ್ಶಿಯವರು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ) ಬಹುಮಹಡಿ ಕಟ್ಟಡ ಡಾ|| ಅಂಬೇಡ್ಕರ್ ರಸ್ತೆ , ಬೆಂಗಳೂರು.
2. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

G:\2009-10 ie suttole.doc

ಅನುಬಂಧ-1

## ಸರ್ವ ಶಿಕ್ಷಣ ಅಭಿಯಾನ - ಕರ್ನಾಟಕ

### 2009-10ನೇ ಸಾಲಿನಲ್ಲಿ ಸಮನ್ವಯ ಶಿಕ್ಷಣದಲ್ಲಿನ ಚಟುವಟಿಕೆವಾರು ಪ್ರಗತಿ ವರದಿ

ಜಿಲ್ಲೆಯ ಹೆಸರು :

| ಕ್ರ. ಸಂ. | ಚಟುವಟಿಕೆ | 2009-10ನೇ ಸಾಲಿಗೆ ಯೋಜನಾ ಅನುದಾನ | | ಒಟ್ಟು ಖರ್ಚು | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಐ.ಇ.ಆರ್.ಟಿಗಳ ವೇತನ / ಟಿ.ಎ / ಡಿ.ಎ | | | | |
| 2 | ಸ.ಶಿ.ದ ಜಿಲ್ಲಾ ಸಮನ್ವಯಾಧಿಕಾರಿಗಳ ವೇತನ | | | | |
| 3 | ಅಸೆಸ್‌ಮೆಂಟ್ ಕ್ಯಾಂಪ್ | | | | |
| 4 | ಸಾಧನ-ಸಲಕರಣೆಗಳ ಪೂರೈಕೆ | | | | |
| 5 | ಸಮುದಾಯ ಜಾಗೃತಿ (ಬ್ಲಾಕ್&ಸಿ.ಆರ್.ಸಿ.ಮಟ್ಟದಲ್ಲಿ) | | | | |
| 6 | ವಿಶೇಷ ಅಗತ್ಯವುಳ್ಳ ಮಕ್ಕಳ ಪೋಷಕರಿಗೆ ತರಬೇತಿ | | | | |
| 7 | ಶಿಕ್ಷಕರ ತರಬೇತಿ (90 ದಿನ) | | | | |
| 8 | ಐ.ಇ.ಆರ್.ಟಿ/ಗೃಹಾಧಾರಿತ ಶಿಕ್ಷಣ ಸ್ವಸೇ ತರಬೇತಿ | | | | |
| 9 | ಗೃಹಾಧಾರಿತ ಶಿಕ್ಷಣ ಮಕ್ಕಳ ಪಾಲಕರಿಗೆ ಸಾರಿಗೆ ಸೌಲಭ್ಯ | | | | |
| 10 | ಕಾರ್ಯಾಗಾರ /ಸಭೆಗಳು | | | | |
| 11 | ಸಮನ್ವಯ ಶಿಕ್ಷಣ ಸಂಪನ್ಮೂಲ ಕೊಠಡಿಗಳ ಬಲವರ್ಧನೆ | | | | |
| 12 | ಕರೆಕ್ಟೀವ್ ಸರ್ಜರಿ | | | | |
| 13 | ಇತರೆ | | | | |
| | ಒಟ್ಟು | | 0.000 | | 0.000 |

ಸಮನ್ವಯ ಶಿಕ್ಷಣ ವಿಭಾಗ

ಅನುಬಂಧ - 2

## ಸರ್ವ ಶಿಕ್ಷಣ ಅಭಿಯಾನ - ಕರ್ನಾಟಕ

### 2009-10ನೇ ಸಾಲಿನಲ್ಲಿ ಸಮನ್ವಯ ಶಿಕ್ಷಣದಲ್ಲಿನ ಚಟುವಟಿಕೆವಾರು ಪ್ರಗತಿ ವರದಿ

ಜಿಲ್ಲೆಯ ಹೆಸರು :

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಚಟುವಟಿಕೆ | 2009-10ನೇ ಸಾಲಿಗೆ ಯೋಜನಾ ಅನುದಾನ | | ಜಿಲ್ಲೆಯಿಂದ ಕ್ಷೇತ್ರಗಳಿಗೆ ಬಿಡುಗಡೆ ಯಾಗಿರುವ ಅನುದಾನ | | ಬ್ಲಾಕಿನಲ್ಲಿ ಹಿಂದಿನ ಮಾಹೆಯವರೆಗೆ ಖರ್ಚಾಗಿರುವ ಹಣ | | ಬ್ಲಾಕಿನಲ್ಲಿ ಈ ತಿಂಗಳಿನಲ್ಲಿ ಖರ್ಚಾಗಿರುವ ಹಣ | | ಬ್ಲಾಕಿನಲ್ಲಿ ಇದುವರೆಗೂ ಖರ್ಚಾಗಿರುವ ಹಣ | | ಜಿಲ್ಲೆಯಲ್ಲಿ ಇದುವರೆಗೂ ಖರ್ಚಾಗಿರುವ ಹಣ | | ಒಟ್ಟು ಖರ್ಚು | |
|---|---|---|---|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಐ.ಇ.ಆರ್.ಟಿ.ಗಳ ವೇತನ / ಟಿ.ಎ / ಡಿ.ಎ | | | | | | | | | | | | | | |
| 2 | ಸ.ಶಿ.ದ ಜಿಲ್ಲಾ ಸಮನ್ವಯಾಧಿಕಾರಿಗಳ ವೇತನ | | | | | | | | | | | | | | |
| 3 | ಅಸೆಸ್‌ಮೆಂಟ್ ಕ್ಯಾಂಪ್ | | | | | | | | | | | | | | |
| 4 | ಸಾಧನ-ಸಲಕರಣೆಗಳ ಪೂರೈಕೆ | | | | | | | | | | | | | | |
| 5 | ಸಮುದಾಯ ಜಾಗೃತಿ (ಬ್ಲಾಕ್&ಸಿ.ಆರ್.ಸಿ.ಮಟ್ಟದಲ್ಲಿ) | | | | | | | | | | | | | | |
| 6 | ವಿಶೇಷ ಅಗತ್ಯವುಳ್ಳ ಮಕ್ಕಳ ಪೋಷಕರಿಗೆ ತರಬೇತಿ | | | | | | | | | | | | | | |
| 7 | ಶಿಕ್ಷಕರ ತರಬೇತಿ (90 ದಿನ) | | | | | | | | | | | | | | |
| 8 | ಐ.ಇ.ಆರ್.ಟಿ/ಗೃಹಾಧಾರಿತ ಶಿಕ್ಷಣ ಸ್ವಸೇ ತರಬೇತಿ | | | | | | | | | | | | | | |
| 9 | ಕಾರ್ಯಗಾರ /ಸಭೆಗಳು | | | | | | | | | | | | | | |
| 10 | ಸಮನ್ವಯ ಶಿಕ್ಷಣ ಸಂಪನ್ಮೂಲ ಕೊಠಡಿಗಳ ಬಲವರ್ಧನೆ | | | | | | | | | | | | | | |
| 11 | ಕರೆಕ್ಟೀವ್ ಸರ್ಜರಿ | | | | | | | | | | | | | | |
| 12 | ಹೆಚ್.ಬಿ.ಇ ಮಕ್ಕಳ ಪೋಷಕರಿಗೆ ಸಾರಿಗೆ ಸೌಲಭ್ಯ | | | | | | | | | | | | | | |
| 13 | ಇತರೆ | | | | | | | | | | | | | | |
| | ಒಟ್ಟು | | 0.000 | | 0.000 | | 0.000 | | 0.000 | | 0.000 | | 0.000 | | 0.000 |



D:\SSA\formats(1).xls